‘ಅವರು ಮಾಧುರ್ಯದ ಅಂತರಾತ್ಮವೇ ಆಗಿರುವರು’

ಸೋದರಿ ನಿವೇದಿತಾ ಕಂಡಂತೆ ಶ್ರೀಮಾತೆಯವರು

ಸ್ವಾಮಿ ನಿತ್ಯಸ್ಥಾನಂದ

ಶ್ರೀಮಾತೆ ಶಾರದಾದೇವಿಯವರ ವಿಶ್ವವಿಶಾಲ ಮಾತೃಹೃದಯದಲ್ಲಿ ವಿದೇಶೀ ಮಹಿಳೆಯರನ್ನೂ ತನ್ನವರನ್ನಾಗಿ ಮಾಡಿಕೊಳ್ಳುವ ಅಸೀಮ ಪ್ರೀತಿ ವ್ಯಕ್ತವಾಗುತ್ತಿತ್ತು. ನಿವೇದಿತೆಯಂತೂ ಶ್ರೀಮಾತೆಯವರ ಪಾಲಿಗೆ ಚಿಕ್ಕ ಮಗುವಿನಂತೆಯೇ ಆಗಿಬಿಟ್ಟಳು. ನಿವೇದಿತಾ ಕಣ್ಣಲ್ಲಿ ಶ್ರೀಮಾತೆ ಹೇಗೆ ಕಂಡರು ಎಂಬ ವಿಷಯವನ್ನು ಕುರಿತು ವಿವರಿಸಿರುವ ಲೇಖಕರು ‘ವಿವೇಕಪ್ರಭ’ದ ಪ್ರಥಮ ಸಂಪಾದಕರಾಗಿದ್ದರು. ಅವರು ಮೈಸೂರು ಆಶ್ರಮದ ಅಧ್ಯಕ್ಷರೂ ಆಗಿದ್ದರು; ಪ್ರಸ್ತುತ ಮೈಸೂರು ಆಶ್ರಮದಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ. ಅವರು ಕನ್ನಡದಲ್ಲಿ ವಿಸ್ತೃತವಾಗಿ ಬರೆದ **‘ಸೋದರಿ ನಿವೇದಿತಾ’** ಜೀವನಚರಿತ್ರೆ ಮೈಸೂರು ಶ್ರೀರಾಮಕೃಷ್ಣ ಆಶ್ರಮದಿಂದ ಪ್ರಕಟವಾಗಿದೆ, ಅತ್ಯಂತ ಜನಪ್ರಿಯವೂ ಆಗಿದೆ. ಉತ್ತಮ ಬರಹಗಾರರೂ, ವಾಗ್ಮಿಗಳೂ, ಚಿಂತಕರೂ ಆಗಿರುವ ಸ್ವಾಮೀಜಿಯವರು ಅನೇಕ ಮಹತ್ವದ ಗ್ರಂಥಗಳನ್ನು ಕನ್ನಡದಲ್ಲಿ ರಚಿಸಿದ್ದಾರೆ.

ಸೋದರಿ ನಿವೇದಿತಾ ಅತ್ಯಂತ ತೀಕ್ಷ್ಣವೂ ಸೂಕ್ಷ್ಮವೂ ಆದ ಬುದ್ಧಿಶಕ್ತಿಯನ್ನು ಹೊಂದಿದ್ದಳು. ಯಾವುದೇ ವಿಷಯವನ್ನು ಅಧ್ಯಯನಕ್ಕೆ ತೆಗೆದುಕೊಂಡರೂ ಅದರ ಹೃದಯಾಂತರಾಳವನ್ನು ಪ್ರವೇಶಿಸುತ್ತಿದ್ದಳು. ವಿದೇಶೀ ಸಂಸ್ಕೃತಿಯಿಂದ ಬಂದಿದ್ದರೂ ಅವಳು ಹಿಂದೂ ಧರ್ಮ ಮತ್ತು ಸಂಸ್ಕೃತಿಯನ್ನು ಅರ್ಥೈಸುವ ರೀತಿ ಎಲ್ಲರೂ ಮೆಚ್ಚುವಂತಹದು. ಆಕೆಯ ಅಂತರ್ದೃಷ್ಟಿ ಅದೆಷ್ಟು ಅಪೂರ್ವವಾದುದೆಂದರೆ ಆಪಾತತಃ ಅರ್ಥಹೀನವಾಗಿ ಕಂಡುಬರುವ ಹಿಂದೂ ಪದ್ಧತಿ, ಸಂಪ್ರದಾಯ ಮತ್ತು ಆಚರಣೆಗಳಲ್ಲಿಯೂ ಅದಾವುದೋ ವಿಶೇಷ ವೈಶಿಷ್ಟ್ಯದ ಹೊಳಹು ಅವಳಿಗೆ ಗೋಚರವಾಗುತ್ತಿತ್ತು. ಆಕೆಯ ಈ ತೀಕ್ಷ್ಣ ಬುದ್ಧಿಶಕ್ತಿಯಿಂದಾಗಿ ಅವಳು ನೀಡುವ ಶ್ರೀಮಾತೆಯವರ ವ್ಯಕ್ತಿಚಿತ್ರವು ನಮಗೆ ತುಂಬ ಪ್ರಾಮುಖ್ಯವೆನಿಸುತ್ತದೆ. ಶ್ರೀಮಾತೆಯವರ ಜೀವನವನ್ನು ತುಂಬ ಆಳವಾಗಿ ಅರ್ಥಮಾಡಿಕೊಂಡಿದ್ದುದರಿಂದಲೇ ಅವಳಲ್ಲಿ ಅವರ ಬಗ್ಗೆ ಅಪಾರ ಭಕ್ತಿ ಉಂಟಾದುದು. ಅತಿ ಸಾಮಾನ್ಯವೆನಿಸುವ ಘಟನೆಗಳಲ್ಲಿಯೂ ಗಂಭೀರ ಆಧ್ಯಾತ್ಮಿಕ ಅರ್ಥವು ನಿವೇದಿತಾಳ ಅಂತರ್ದೃಷ್ಟಿಗೆ ಗೋಚರವಾಗುತ್ತಿತ್ತು. ಅವಳು ಒಮ್ಮೆ ಶ್ರೀಮಾತೆಯವರ ಬಗ್ಗೆ ಬರೆಯುತ್ತಾಳೆ: ‘‘ಭಾವಿಸುವುದರಲ್ಲಿ ಅವರು ಪರಿಪೂರ್ಣರು’’ ಎಂದು. ಶ್ರೀಮಾತೆಯವರ ಪರಿಶುದ್ಧ ಭಾವವು ಮಕ್ಕಳೆಲ್ಲರನ್ನೂ ಹೇಗೆ ತನ್ನ ತೆಕ್ಕೆಯಲ್ಲಿ ಹಿಡಿದಿರಿಸಿಕೊಳ್ಳುತ್ತಿತ್ತು ಎಂಬುದನ್ನು ನಿವೇದಿತಾ ಸರಿಯಾಗಿ ಗ್ರಹಿಸಿದಳು. ಈ ದೃಷ್ಟಿಯಿಂದಲೇ, ಶ್ರೀಮಾತೆಯವರು ಜಗತ್ತಿನಲ್ಲಿಯೇ ಅತಿಶ್ರೇಷ್ಠ ಮಹಿಳೆಯೆಂದು ನಿವೇದಿತಾ ತೀರ್ಮಾನಿಸುತ್ತಾಳೆ.

ಶ್ರೀಮಾತೆಯವರು ಪುರುಷ ಭಕ್ತರ ಮುಂದೆ ಮುಖ ಮುಚ್ಚಿಕೊಂಡೇ ಇರುತ್ತಿದ್ದರು. ತಮ್ಮ ಪತಿಯ ಮುಂದೆಯೂ ಲಜ್ಜಾಪಟಾವೃತರಾಗಿರುತ್ತಿದ್ದರು. ಪ್ರಾರಂಭದಲ್ಲಿ ನಿವೇದಿತಾಳಿಗೆ ಇದು ತುಂಬ ವಿಚಿತ್ರವೆನಿಸುತ್ತಿತ್ತು. ಆದರೆ ಮುಂದೆ ಇದರ ಹಿಂದಿರುವ ಭಾವವನ್ನು ಗ್ರಹಿಸಲು ಸಮರ್ಥಳಾದಳು. ಈ ಕುರಿತು ನಿವೇದಿತಾ ಬರೆಯುತ್ತಾಳೆ: ‘‘ಎಲ್ಲ ವಿಷಯದಲ್ಲಿಯೂ ತಮ್ಮನ್ನು ಮರೆಮಾಚಿಕೊಳ್ಳುವ ಅವರ ಈ ಭಾವವನ್ನು ನೋಡಿದಾಗ ನನ್ನಂತರಂಗವು ಅತ್ಯಾಶ್ಚರ್ಯದಿಂದ ತುಂಬಿಕೊಳ್ಳುತ್ತದೆ.’’

ನಿವೇದಿತಾ ಶ್ರೀಮಾತೆಯವರನ್ನು ಅಷ್ಟೊಂದು ಭಕ್ತಿಭಾವದಿಂದ ಕಾಣಲು ಕಾರಣೀಭೂತವಾದುದು ಯಾವುದು? ಸರಳತೆಯ ಮುಸುಕಿನ ಹಿಂದೆ ಶ್ರೀಮಾತೆಯವರ ಅತಿಮಾನುಷ ಶ್ರೇಷ್ಠತೆಯನ್ನು ಅವಳು ಕಂಡುಕೊಂಡಳು. ಅವಳ ಮಾತಿನಲ್ಲಿಯೇ ಹೇಳಬೇಕೆಂದರೆ: ‘‘ಶ್ರೀಮಾತೆಯವರಲ್ಲಿ ಕಾಣುತ್ತಿದ್ದ ಜ್ಞಾನ ಮತ್ತು ಮಾಧುರ್ಯ ಅತ್ಯಂತ ಸರಳ ಸ್ತ್ರೀಯರಿಗೆ ಮಾತ್ರ ದಕ್ಕುವಂತಹದು.’’

ಸರಳತೆಯ ಗುಣ ಅಷ್ಟು ಸರಳವಾಗಿ ದಕ್ಕುವಂತಹುದಲ್ಲ. ‘‘ಅನೇಕ ಜನ್ಮಗಳ ಪುಣ್ಯದ ಫಲವಾಗಿ ಒಬ್ಬ ವ್ಯಕ್ತಿ ಸರಳನಾಗಿ

ಹುಟ್ಟುತ್ತಾನೆ'' ಎಂದು ಶ್ರೀರಾಮಕೃಷ್ಣರು ಹೇಳುತ್ತಾರೆ. ಸರಳತೆ ಅತ್ಯಂತ ಸ್ವಾಭಾವಿಕವಾದರೂ ಸ್ವಾಭಾವಿಕ ಸ್ಥಿತಿಯಲ್ಲಿರುವುದು ಅತ್ಯಂತ ಸುಲಭವಾದರೂ ಅಸ್ವಾಭಾವಿಕವಾಗಿ ಇರುವುದೇ ಜನರ ಸ್ವಭಾವವಾಗಿರುತ್ತದೆ. ಇದಕ್ಕೆ ಸಾಮಾಜಿಕ ಸನ್ನಿವೇಶಗಳೂ ಬಹು ಮಟ್ಟಿಗೆ ಕಾರಣಗಳಾಗಿರುತ್ತವೆ. ಇಂದಿನ ಸಮಾಜ ಅತ್ಯಂತ ಸಂಕೀರ್ಣ ವಾಗುತ್ತಿದೆ. ವಾಣಿಜ್ಯಸಂಸ್ಕೃತಿ, ಅಸಂಖ್ಯ ಬಗೆಯ ಉಡುಗೆ ತೊಡಿಗೆಗಳು, ವಿವಿಧ ಮನರಂಜನಾ ಕಾರ್ಯಕ್ರಮಗಳು, ಕಲ್ಪನಾ ತೀತವಾದ ಗ್ಯಾಡ್ಜೆಟ್‌ಗಳು, ಬಗೆಬಗೆಯ ಜಾಹಿರಾತುಗಳು, ಪ್ರಚಾರ ಪ್ರಿಯತೆ (publicity glamour) ಇತ್ಯಾದಿಗಳು ವ್ಯಕ್ತಿಯ ಮೇಲೆ ಪ್ರಭಾವವನ್ನು ಬೀರಿ ಅವನನ್ನು ಸ್ವಾಭಾವಿಕತೆಯಿಂದ ದೂರ ಸೆಳೆಯುತ್ತವೆ. ಸಾಮಾಜಿಕ ಸನ್ನಿವೇಶಗಳಿಗೆ ಮಣಿದು ಅವನು ತನ್ನ ಸಹಜತೆಯನ್ನು ಕಳೆದುಕೊಳ್ಳಬೇಕಾಗುತ್ತದೆ. ಕೃತಕ ನಗೆ, ಕೃತಕ ವರ್ತನೆ, ಕೃತಕ ಮಾತು ಇವು ಅನೇಕರಿಗೆ ಸಹಜವಾಗಿಬಿಟ್ಟಿರುತ್ತವೆ. ಸರಳತೆಯ ಗುಣವನ್ನು ಮೆಚ್ಚುವ ಸಾಮರ್ಥ್ಯವನ್ನೂ ಅವರು ಕಳೆದುಕೊಂಡಿರುತ್ತಾರೆ. ಸರಳರಾಗಿದ್ದರೆ ಜನ ಮೆಚ್ಚುವುದಿಲ್ಲವೆಂದು ಸಮಾಜದೊಡನೆ ಹೊಂದಿಕೊಳ್ಳುವುದಕ್ಕಾಗಿ, ಒಟ್ಟಿನಲ್ಲಿ ಸಾಮಾಜಿಕ ವ್ಯಕ್ತಿಯಾಗಿ ತಮ್ಮ ಉಳಿವಿಗಾಗಿ, ಅನೇಕರು ಕೃತಕತೆಯನ್ನು ಜೀವನ ವಿಧಾನವಾಗಿ ಸ್ವೀಕರಿಸುತ್ತಾರೆ. ಇಂತಹ ಸಮಾಜದಲ್ಲಿ ಸಹಜತೆಯೇ ಅಸಹಜವಾಗಿ ತೋರುವುದು ಸಹಜವಾಗಿಯೇ ಇದೆ.

ಆದಾಗ್ಯೂ ನಿಜವಾದ ಶ್ರೇಷ್ಠತೆ ಇರುವುದು ಸರಳತೆಯಲ್ಲಿ. ಸರಳತೆಯ ಹಿಂದಿರುವ ಶ್ರೇಷ್ಠತೆಯು ಕೆಲವೇ ಭಾಗ್ಯವಂತರ ಗಮನಕ್ಕೆ ಬರುವಂತಹುದು. ನಿವೇದಿತಾ ಅಂತಹ ಓರ್ವ ವ್ಯಕ್ತಿ. ಶ್ರೀಮಾತೆಯವರ ಮಡಿವಂತಿಕೆ ಮತ್ತು ಸರಳತೆಯ ಹಿಂದೆ ಅವರ ಮೇರುಸದೃಶ ಆಧ್ಯಾತ್ಮಿಕ ವ್ಯಕ್ತಿತ್ವವನ್ನು ಅವಳು ಅನಾವರಣ ಗೊಳಿಸಿದಳು. ಜೋಸೆಫಿನ್ ಮ್ಯಾಕ್ಲೋಡ್‌ಳಿಗೆ ನಿವೇದಿತಾ ಒಮ್ಮೆ ಬರೆಯುತ್ತಾಳೆ: ''ನನ್ನ ಶ್ರೀಮಾತೆಯವರು ಸರಳ ಹಿಂದೂ ಮಹಿಳೆ ಅಷ್ಟೆ. ಆದರೂ ನನಗನಿಸುವಂತೆ ಅವರು ಇಂದು ಜಗತ್ತಿನಲ್ಲೇ ಅತ್ಯಂತ ಶ್ರೇಷ್ಠ ಮಹಿಳೆ. ಅವರು ಚಿಕ್ಕಮಗುವಿನಂತಿರುವರು. ಅವರಲ್ಲಿ ಜೀವಂತಿಕೆ ಮತ್ತು ಪ್ರಭೆ ಎದ್ದು ಕಾಣುತ್ತವೆ... ಅವರು ಯಾವಾಗಲೂ ಸಮಾನವಾಗಿ ಇರುತ್ತಾರೆ. ಆಃ! ಎಂದಿಗೂ ಬದ ಲಾಗದ ವ್ಯಕ್ತಿಯೊಡನಿರುವುದು ಎಂಥಾ ಸುಖ! ಅವರು ಸಾರ್ವ ತ್ರಿಕ, ಸಾರ್ವಕಾಲಿಕ ಆದರ್ಶ ಹಿಂದೂ, ಆದರ್ಶ ಶಿಷ್ಯೆ ಮತ್ತು ಆದರ್ಶ ಮಹಿಳೆ.'' ***(Reminiscences of Sri Sarada Devi,*** *Advaita Ashrama, Kolkata, P. 118)*

ಶ್ರೀಮಾತೆಯವರು ತಮ್ಮ ಅತ್ಯಂತ ಸರಳತೆಯಿಂದಾಗಿ ಚಿಕ್ಕ ಮುಗ್ಧ ಬಾಲಕಿಯಂತೆ ನಿವೇದಿತಾಗೆ ಕಾಣಿಸಿಕೊಂಡರು. ಅವಳು ಮುಂದೆ ಮ್ಯಾಕ್ಲೋಡ್‌ಳಿಗೆ ಹೀಗೆ ಬರೆಯುತ್ತಾಳೆ: ''ಶ್ರೀಮಾತೆ ಯವರು ಚಿಕ್ಕವರಾಗಿ ಕಾಣಿಸಿಕೊಳ್ಳುತ್ತಾರೆ. ಅವರು ಆನಂದಭರಿತ ರಾಗಿರುತ್ತಾರೆ. ಸದಾ ಕ್ರಿಯಾಶೀಲರು. ಅಷ್ಟಾದರೂ ಅವರ ವಯಸ್ಸು ೬೫ (೫೫) ಮೀರಿದೆ. ನಾನು ಅವರಿಗಿಂತ ಹಿರಿಯಳಾಗಿ ಕಾಣಿಸಿಕೊಳ್ಳುತ್ತೇನೆ, ನನಗಿನ್ನೂ ೪೫... ಅವರ ಧ್ವನಿಯೂ ಎಳೆಯ ದಾಗಿದೆ. ಹನ್ನೊಂದು ವರ್ಷದ ಹಿಂದಿನಂತೆಯೇ ಈಗಲೂ ಅವರ ನಗುವಿನಲ್ಲಿ ಆನಂದವಿದೆ.'' ಶ್ರೀಮಾತೆಯವರ ಈ ವ್ಯಕ್ತಿವೈಶಿಷ್ಟ್ಯಕ್ಕೆ ಸಂಬಂಧಿಸಿದಂತೆ ಸಾಧುವೊಬ್ಬರ ಹೇಳಿಕೆಯನ್ನು ಇಲ್ಲಿ ಉಲ್ಲೇಖಿಸ ಬಹುದು: ''ಅವರ ಮುಖಭಾವದಲ್ಲಿ ಮುಗ್ಧಬಾಲಕಿಯ ಕೋಮ ಲತೆ ಮತ್ತು ಮಾರ್ದವತೆ, ಬಾಯಲ್ಲಿ ಕರುಣೆ ಮತ್ತು ಸಹಾನು ಭೂತಿಯ ಮಾತುಗಳು ಮಾತ್ರ. ಕಣ್ಣಿನಲ್ಲಿ ಅವರ್ಣನೀಯ ಸ್ವರ್ಗೀಯ ಕಾಂತಿ, ಆ ರೂಪದಲ್ಲಿ ನೋಡಿದವರಿಗೆ ಇವರು ನನ್ನ ತಾಯಿಯೇ ಎಂಬ ಭಾವನೆಯನ್ನು ಹುಟ್ಟಿಸುವ ಅದ್ಭುತ ಶಕ್ತಿ. ನಿಜವಾಗಿಯೂ ನಸುನೋಟಕ್ಕೆ ಕಾಣಿಸದ ಸೂಕ್ಷ್ಮ ಗಾಂಭೀರ್ಯ ಅವರದು. ಅಸಾಮಾನ್ಯ ದೇಹಸೌಂದರ್ಯವಾಗಲಿ ನೋಡಿದಾಕ್ಷಣ ಭಯ-ಭಕ್ತಿಯನ್ನು ಹುಟ್ಟಿಸುವ ಮಹಾಶೀಲಿಯಾಗಲಿ ಅವರ ದಾಗಿರಲಿಲ್ಲ.'' *(ಶ್ರೀಮಾತೆ ಶಾರದಾದೇವಿ, ಪು. ೩೪೬)*

ಶ್ರೀಮಾತೆಯವರು ಮಗುವಿನಂತಹ ಸರಳತೆಯಿಂದ ಭೂಷಿತ ರಾಗಿದ್ದರೂ ಅವರ ಮುಂದೆ ಬಾಲಿಶ ಚೇಷ್ಟೆಗೆ ಅವಕಾಶವಿರಲಿಲ್ಲ. ಅವರ ವ್ಯಕ್ತಿತ್ವದಲ್ಲಿ ಅಂತಹ ಘನತೆ-ಗಾಂಭೀರ್ಯವಿತ್ತು. ಅವರ ಈ ಗುಣವೈಶಿಷ್ಟ್ಯವನ್ನು ಗುರುತಿಸಿ ನಿವೇದಿತಾ ಬರೆಯುತ್ತಾಳೆ: ''ಆದರೂ, ನನಗನಿಸುವಂತೆ, ಅವರ ಸೌಜನ್ಯತೆಯಲ್ಲಿ ಕಂಡು ಬರುವ ರಾಜಗಾಂಭೀರ್ಯ, ಮತ್ತು ಅವರ ಅಪೂರ್ವ ತೆರೆದ ಮನಸ್ಸು, ಅವರ ಆಧ್ಯಾತ್ಮಿಕ ವ್ಯಕ್ತಿತ್ವದಷ್ಟೇ ಅದ್ಭುತವಾದವು. ಅವರ ಮುಂದೆ ಎಂಥಾ ನೂತನವೂ ಜಟಿಲವೂ ಆದ ಪ್ರಶ್ನೆಯನ್ನಿರಿಸಿದರೂ ಅವರು ತಮ್ಮದೇ ಆದ ಅಭಿಪ್ರಾಯವನ್ನು ವ್ಯಕ್ತಪಡಿಸಲು ಹಿಂಜರಿ ಯುವುದನ್ನು ನಾನು ಗಮನಿಸಿಲ್ಲ. ತಮ್ಮ ನಿರ್ದುಷ್ಟ ಒಳದೃಷ್ಟಿ ಯಿಂದ ವಿಷಯದ ಅಂತರಾಳವನ್ನೇ ಪ್ರವೇಶಿಸುತ್ತಿದ್ದರು, ಮತ್ತು ಸಮಸ್ಯೆಯನ್ನು ಕುರಿತಂತೆ ಸರಿಯಾದ ದೃಷ್ಟಿಕೋನ ಪ್ರಶ್ನಕನಲ್ಲಿ ಉಂಟಾಗುವಂತೆ ಮಾಡುತ್ತಿದ್ದರು.'' ***(Reminiscences of Sri Sarada Devi,*** *Advaita Ashrama, Kolkata, P. 112)*

ಆಳವೂ ವಿಶಾಲವೂ ಆದ ಹೃದಯದೊಂದಿಗೆ ಶ್ರೀಮಾತೆಯವ ರಲ್ಲಿ, ಯಾವಾಗಲೂ ಸದ್ಗುಣಗಳ ಕಡೆಗೇ ಒಲವುಳ್ಳ ತೀಕ್ಷ್ಣ ಬುದ್ಧಿಯೂ ಇತ್ತು. ಬುದ್ಧಿಶಕ್ತಿ ಬೆಳೆಯುವುದು ಕೇವಲ ಅದರ ಪ್ರಯೋಗದಿಂದಲ್ಲ, ನೀತಿವಂತ ಬಾಳುವೆಯ ಮೂಲಕ ಎಂಬ ಈ ಒಂದು ಸತ್ಯವನ್ನು ಆಧುನಿಕ ಶಿಕ್ಷಣವು ಗಂಭೀರವಾಗಿ ಪರಿಗಣಿಸ ಬೇಕಾಗಿದೆ ಎಂಬುದು ಚಿಂತಕರೊಬ್ಬರ ಅಭಿಪ್ರಾಯ. ತಮ್ಮ ಸಾಮಾನ್ಯ ಜೀವನದ ಸರಳತೆಯಲ್ಲಿ ಶ್ರೀಮಾತೆಯವರು ಧರ್ಮ ಜೀವನದ ಅತಿಶ್ರೇಷ್ಠ ನಿಯಮಗಳನ್ನು ಹೊರಮೂಡಿಸಿದರು; ತಮ್ಮ ಪರಿಶುದ್ಧ ಭಾವದ ಮೂಲಕ ಅನೇಕರ ಜೀವನವನ್ನು ಪರಿವರ್ತಿಸಿದರು; ತಮ್ಮ ಅಹೇತುಕ ಪ್ರೇಮಶಕ್ತಿಯ ಮೂಲಕ ಎಲ್ಲರೂ ಅವರನ್ನು ಗೌರವಿಸುವಂತೆ, ಪೂಜಿಸುವಂತೆ ಮತ್ತು ಅನುಸರಿಸುವಂತೆ ಒತ್ತಾಯಿಸಿದರು.

ಶ್ರೀಮಾತೆ ಶಾರದಾದೇವಿಯವರಿಗೆ ಹಳ್ಳಿಯ (ಜಯರಾಮ ಬಾಟಿಯ) ಮುಕ್ತ ವಾತಾವರಣದಲ್ಲಿರುವುದೆಂದರೆ ತುಂಬ ಆನಂದ.

ಅಲ್ಲಿ ಅವರಿಗೆ ಪಟ್ಟಣದ ಯಾವ ಅನುಕೂಲತೆಗಳೂ ಲಭ್ಯವಿರಲಿಲ್ಲ. ಅವರಿಗೆ ಸಹಾಯ ಮಾಡಲು ಸೇವಕರೂ ಇರಲಿಲ್ಲ ಮತ್ತು ಸಂಬಂಧಿಕರು ಕೊಡುತ್ತಿದ್ದ ಕಷ್ಟಗಳಂತೂ ಹೇಳತೀರದು. ಆದರೂ ಅಲ್ಲಿರುವುದೇ ಅವರಿಗೆ ಆನಂದ. ಅಲ್ಲಿ ಸ್ವಚ್ಛಂದವಾಗಿ ಓಡಾಡಿಕೊಂಡು ಇರುತ್ತಿದ್ದರು, ಕೊಲ್ಕತ್ತಾದಿಂದ ಹೊರಟಾಗ ಹಾಯೆನಿಸುತ್ತಿತ್ತು ಅವರಿಗೆ. ಕೊಲ್ಕತ್ತಾದಲ್ಲಿ ಪಂಜರದೊಳಗಿನ ಹಕ್ಕಿಯಂತೆ ಇರಬೇಕಾಗುತ್ತಿತ್ತು. ಅಲ್ಲಿ ಅವರ ಊಟ, ಚಲನ-ವಲನ, ಸಂದರ್ಶನ ಗಂಟೆಗೆ ಸರಿಯಾಗಿ ಆಗಬೇಕಿತ್ತು. ಆದರೆ ಹಳ್ಳಿಯಲ್ಲಿ ಹಾಗಲ್ಲ, ತಮ್ಮ ಮನಸ್ಸಿಗೆ ಬಂದಂತೆ ಇರಬಹುದಿತ್ತು. ನಾಗರಿಕ ಔಪಚಾರಿಕತೆಗಳ ವಿರುದ್ಧ ಅವರು ಆಗಾಗ ತಮ್ಮ ಅಸಮಾಧಾನವನ್ನು ವ್ಯಕ್ತಪಡಿಸುತ್ತಿದ್ದುದುಂಟು: ''ಕೋಲ್ಕತ್ತಾದಲ್ಲಿ ನಾನು ಮಾತನಾಡುವಾಗ ಒಂದೊಂದು ಶಬ್ದವನ್ನೂ ತೂಗಿನೋಡಬೇಕು, ಎಲ್ಲಿ ಜನ ನೊಂದುಕೊಳ್ಳುತ್ತಾರೊ ಎಂದು. ಜಯರಾಮಬಾಟಿಯಲ್ಲಿಯೇ ನನಗೆ ಹಾಯೆನಿಸುತ್ತದೆ. ಹಳ್ಳಿಯವರಿಗೆ ಮನಸ್ಸಿಗೆ ಬಂದದ್ದನ್ನು ನಿರ್ದಾಕ್ಷಿಣ್ಯವಾಗಿ ಹೇಳಿಬಿಡುತ್ತೇನೆ. ಅವರೂ ಅಷ್ಟೆ, ಯಾವ ಮುಚ್ಚುಮರೆಯೂ ಇಲ್ಲ. ಆದರೆ ಕಲ್ಕತ್ತದಲ್ಲಿ ಸ್ವಲ್ಪ ಹದತಪ್ಪಿದರೂ ಸಾಕು ಜನ ನೊಂದುಕೊಳ್ಳುತ್ತಾರೆ.''

ಕೊಲ್ಕತ್ತದಲ್ಲಿ ಅವರಿಗೆ ಅನೇಕ ಶ್ರೀಮಂತ ವಿದ್ಯಾವಂತ ಭಕ್ತರಿದ್ದರು, ಶ್ರೀರಾಮಕೃಷ್ಣರ ಸಂನ್ಯಾಸಿ ಶಿಷ್ಯರು ಮತ್ತು ಯುವ ಸಂನ್ಯಾಸಿಗಳು ಇದ್ದರು. ಅವರೆಲ್ಲ ಅತ್ಯಂತ ಪೂಜ್ಯಭಾವದಿಂದ ಅವರನ್ನು ನೋಡಿಕೊಳ್ಳುತ್ತಿದ್ದರು. ಆದರೂ ತುಂಬ ಅನಾದರದ ಕಷ್ಟದ ಹಳ್ಳಿಯ ವಾತಾವರಣದಲ್ಲಿಯೇ ಅವರು ಇರಲು ಇಷ್ಟಪಡುತ್ತಿದ್ದರು. ಇದಕ್ಕೆ ಮುಖ್ಯಕಾರಣ ಅವರು ಸರಳತೆಯನ್ನು ತುಂಬ ಪ್ರೀತಿಸುತ್ತಿದ್ದುದು. ಅವರಿಗೆ ಪಟ್ಟಣಿಗರ ಗೌರವಾದರಗಳಿಗಿಂತ ಹಳ್ಳಿಗರ ಮುಗ್ಧ, ಸರಳ ವರ್ತನೆ ಇಷ್ಟವಾಗಿತ್ತು. ಅವರು ಹಳ್ಳಿಗರಿಂದ ಯಾವುದೇ ವಿಶೇಷ ಗೌರವವನ್ನೂ ನಿರೀಕ್ಷಿಸಲಿಲ್ಲ. ಪಟ್ಟಣದಿಂದ ಬಂದ ಭಕ್ತರು ಶ್ರೀಮಾತೆಯವರಿಗೆ ತೋರಿಸುತ್ತಿದ್ದ ಭಕ್ತಿಯನ್ನು ನೋಡಿ ಕೆಲವು ಹಳ್ಳಿಗರಿಗೆ ಆಶ್ಚರ್ಯವಾಗುತ್ತಿತ್ತು. ಅವರು ಶ್ರೀಮಾತೆಯವರನ್ನು ಕೇಳುತ್ತಿದ್ದರು: ''ತಾಯಿ, ಅವರೆಲ್ಲ ನಿಮಗೆ ಅಷ್ಟೊಂದು ಗೌರವಿಸುತ್ತಾರೆ, ಪೂಜಿಸುತ್ತಾರೆ, ಆದರೆ ನಮಗೆ ನಿಮ್ಮಲ್ಲಿ ಅಂಥ ವಿಶೇಷವೇನೂ ಕಾಣುತ್ತಿಲ್ಲವಲ್ಲ?'' ಶ್ರೀಮಾತೆಯವರು ಮುಗುಳ್ನಕ್ಕು ಹೇಳುತ್ತಿದ್ದರು, ''ವಿಶೇಷವೇನು ಬಂತು! ನಾನೊಬ್ಬ ಸಾಮಾನ್ಯ ಮಹಿಳೆ, ನಿಮ್ಮ ಶಾರದೆ, ಅಷ್ಟೆ'' ಎಂದು. ಹಳ್ಳಿಗರಿಗೆ ಅವರು ಪ್ರೀತಿಯ ಸಹೋದರಿ ಶಾರದೆಯಾಗಿದ್ದರು. ಅವರಿಗೆಲ್ಲ ಅವರು ಮುಗ್ಧ ಬಾಲಕಿಯಾಗಿದ್ದರು. ಆ ರೀತಿ ಅವರ ಪ್ರೀತಿಯನ್ನು ಸವಿಯುವುದರಲ್ಲೇ ಶ್ರೀಮಾತೆಯವರಿಗೆ ಅತ್ಯಾನಂದ. ಸ್ವಾಮಿ ಅಶೇಷಾನಂದರು ಹೇಳುತ್ತಾರೆ: ''ಶ್ರೀಮಾತೆಯವರ ಜೀವನದಿಂದ ನಾನು ಕಲಿತ ಎರಡು ಪಾಠಗಳೆಂದರೆ, ಪವಿತ್ರತೆ ಮತ್ತು ಸರಳತೆ. ಜೀವನದ ಪ್ರತಿಯೊಂದು ಮಹಾನ್ ವಸ್ತುವೂ ಸರಳ. ಶೈಶವಾವಸ್ಥೆಯಲ್ಲಿ ನಾವು ಸವಿಯುವ ಮಾತೃಸ್ನೇಹ ಅದೆಷ್ಟು ಸರಳ! ಆದರೆ ಶ್ರೀಮಾತೆಯವರ ಸರಳತೆ ಅಸಾಧಾರಣವಾದುದು!''

ಈ ಅತುಲನೀಯ ಸರಳತೆಯ ಹಿಂದಿರುವ ರಹಸ್ಯವನ್ನು ನಿವೇದಿತಾ ಅನಾವರಣಗೊಳಿಸುತ್ತಾಳೆ: ''ಶ್ರೀಮಾತೆಯವರ ಬಾಳುವೆಯನ್ನು ನೋಡಿದಾಗ ಅವರು ತಾವರೆಯ ಎಲೆಯಂತಿದ್ದರು ಎನಿಸುತ್ತದೆ. ಎಲ್ಲ ಕಡೆಯಿಂದಲೂ ಪ್ರಪಂಚವನ್ನು ಸ್ಪರ್ಶಿಸಿದರೂ ಯಾವುದರಿಂದಲೂ ವಿಚಲಿತರಾಗದ ಮತ್ತು ಕಲುಷಿತರಾಗದ ಜೀವನ ಅವರದಾಗಿತ್ತು. ಅವರ ಜೀವನ ದಿವ್ಯಾನಂದಭರಿತವಾಗಿತ್ತು. ಅವರು ಯಾವಾಗಲೂ ಪರಿಪೂರ್ಣ ಪತ್ನಿಯಾಗಿ ಆ ಹಿಂದೂ ಆದರ್ಶದಂತೆ ಬಾಳಿದರು. ಆಹ್! ಎಷ್ಟೊಂದು ಪರಿಪೂರ್ಣರು ಅವರು! ಅವರ ಪ್ರೀತಿ ಎಷ್ಟು ಆಳ! ನಿಜವಾಗಿಯೂ ಆಶ್ಚರ್ಯವೆನಿಸುತ್ತದೆ.'' *(ಅದೇ, ಪು. ೧೧೭)*

ಶ್ರೀಮಾತೆಯವರಲ್ಲಿದ್ದ ಈ ನಿರ್ವಿಕಾರ ವಾಸ್ತವದೃಷ್ಟಿಗೆ ಮುಖ್ಯ ಕಾರಣ ಅವರ ಯಥಾರ್ಥ ಸರಳತೆ. ಈ ಸರಳತೆಯ ಮೂಲ ಅವರ ಮನಸ್ಸು ನಿಷೇಧಾತ್ಮಕ ಭಾವಗಳಿಂದ ಮುಕ್ತವಾಗಿದ್ದುದು. ಈ ನಿಷೇಧಾತ್ಮಕ ಭಾವಗಳೇ ನಮ್ಮ ದೃಷ್ಟಿಕೋನವನ್ನು ವಿಕೃತಗೊಳಿಸುವುದು.

ಬಾಹ್ಯ ಸರಳತೆ ಆಂತರಿಕ ಸರಳತೆಯನ್ನು ಅವಲಂಬಿಸಿರುತ್ತದೆ. ಆಂತರಿಕ ಸರಳತೆಯನ್ನು ಕೆಡಿಸುವ ಶಕ್ತಿ ಯಾವುದೆಂದರೆ ರಾಗದ್ವೇಷಗಳಿಂದ ಉಕ್ಕುವ ಬಲವಾದ ಭಾವೋದ್ವೇಗಗಳು. ಇಂತಹ ಭಾವೋದ್ವೇಗಗಳ ಒತ್ತಡಕ್ಕೆ ಒಳಗಾದಾಗ ಆಲೋಚನೆಗಳು ವಕ್ರವಾಗುತ್ತವೆ. ಬೆಳಕಿನ ಕಿರಣಗಳು ಕೂಡ ತುಂಬ ಗುರುತ್ವವುಳ್ಳ ಆಕಾಶಕಾಯದ ಹತ್ತಿರ ಬರುವಾಗ ವಕ್ರವಾಗುತ್ತವೆ ಎಂದು ವಿಜ್ಞಾನಿಗಳು ಹೇಳುತ್ತಾರೆ. ಹಾಗೆಯೇ ಭಾವೋದ್ವೇಗಗಳ ಪ್ರಭಾವದಿಂದಾಗಿ ನಮ್ಮ ಆಲೋಚನೆಗಳು ವಿಕೃತಗೊಳ್ಳುತ್ತವೆ, ವಸ್ತುನಿಷ್ಠವಾಗಿ ಆಲೋಚಿಸುವ ಸಾಮರ್ಥ್ಯವನ್ನು ನಾವು ಕಳೆದುಕೊಳ್ಳುತ್ತೇವೆ. ಇದರ ಪರಿಣಾಮವಾಗಿಯೇ ವಸ್ತು, ವ್ಯಕ್ತಿ ಮತ್ತು ಘಟನೆಗಳು ನಮ್ಮ ಪಾಲಿಗೆ ಯಾಥಾರ್ಥತೆಯನ್ನು ಕಳೆದುಕೊಳ್ಳುತ್ತವೆ. ನಮ್ಮ ಆಲೋಚನೆಗಳ ವಿಕೃತಿಗೆ ಅನುಗುಣವಾಗಿ ಅವೂ ವಿಕೃತಿಯನ್ನು ಹೊಂದುತ್ತವೆ. ನಮ್ಮ ಆಲೋಚನೆ ನೇರವೂ ಸರಳವೂ ಆಗಿದ್ದರೆ, ನಮ್ಮಲ್ಲಿ ಯಥಾರ್ಥ ದೃಷ್ಟಿ ಇದ್ದರೆ, ವ್ಯಕ್ತಿ ಮತ್ತು ಘಟನೆಗಳು ದೋಷಯುಕ್ತವಾಗಿ ಕಾಣುವುದಿಲ್ಲ, ವಾಸ್ತವವಾಗಿ ಕಾಣುತ್ತವೆ. ಒಬ್ಬ ವ್ಯಕ್ತಿ ತಪ್ಪು ಮಾಡಬಹುದು; ನಾವು ಆ ತಪ್ಪನ್ನು ಗುರುತಿಸಿದರೂ, ವ್ಯಕ್ತಿಯ ಮೇಲೆ ಸಂಪೂರ್ಣ ದೋಷಾರೋಪಣೆ ಮಾಡಬೇಕಾದ ಆವಶ್ಯಕತೆ ಇಲ್ಲ. ಅವನು ಮಾಡುವ ತಪ್ಪು (ಅದು ಕೊಲೆಯೇ ಆಗಿರಬಹುದು) ಒಂದು ಘಟನೆ ಮತ್ತು ಹಲವಾರು ಅಂಶಗಳು (factors) ಕೂಡಿ ಆ ಘಟನೆ ನಡೆದಿದೆ. ಅವುಗಳಲ್ಲಿ ಬಾಹ್ಯ ಸನ್ನಿವೇಶಗಳು ಹಾಗೂ ವ್ಯಕ್ತಿಯ ಮಾನಸಿಕ ಒತ್ತಡಗಳೂ ಸೇರಿರುತ್ತವೆ. ಆದ್ದರಿಂದ ಇಲ್ಲಿ ವ್ಯಕ್ತಿ ಅನೇಕ ಒತ್ತಡಗಳ ಬಲಿಪಶುವಾಗಿ ಒಂದು ತಪ್ಪನ್ನು ಮಾಡಿರುತ್ತಾನೆ. ಈ ವಾಸ್ತವ ದೃಷ್ಟಿ ಇದ್ದರೆ ವ್ಯಕ್ತಿಯ ಬಗ್ಗೆ ಸಹಾನುಭೂತಿ ನಮಗುಂಟಾಗುತ್ತದೆಯೇ ಹೊರತು, ತಿರಸ್ಕಾರ ಅಥವಾ ದ್ವೇಷ ಅಲ್ಲ.

ಈ ವಾಸ್ತವ ದೃಷ್ಟಿ ಆಂತರಿಕ ಸರಳತೆಯ ಪರಿಣಾಮ. ಶ್ರೀಮಾತೆಯವರ ಮನಸ್ಸು ಸರಳವಾಗಿದ್ದುದರಿಂದಲೇ ಅವರು ದೋಷದರ್ಶಿಗಳಾಗಿರಲಿಲ್ಲ. ಒಬ್ಬಕಳ್ಳನನ್ನೂ ಸಹಾನುಭೂತಿಯಿಂದ ಪುತ್ರನನ್ನಾಗಿ

ಸ್ವೀಕರಿಸಿದರು. ಕಳ್ಳತನ ಸರಿ ಎಂಬುದು ಅವರ ಅಭಿಪ್ರಾಯವಲ್ಲ. ಆದರೆ ಒಬ್ಬ ವ್ಯಕ್ತಿಯನ್ನು ಕಳ್ಳನನ್ನಾಗಿ ನೋಡಲು ಅವರ ಮನಸ್ಸು ನಿರಾಕರಿಸಿತು. ಸ್ವಾಮಿ ವಿವೇಕಾನಂದರು ಹೇಳುವಂತೆ ಒಂದು ಮಗುವಿಗೆ ಕಳ್ಳನು ಕಾಣಿಸುವುದಿಲ್ಲ, ಅದು ಕಳ್ಳನನ್ನು ಒಂದು ವ್ಯಕ್ತಿಯಾಗಿ ನೋಡುತ್ತದೆ ಅಷ್ಟೆ. ಮಗುವು ಮನಸ್ಸಿನ ಅಪಕ್ವತೆಯಿಂದಾಗಿ ಕಳ್ಳನನ್ನು ನೋಡದಿದ್ದರೆ, ಶ್ರೀಮಾತೆಯವರು ಮನಸ್ಸಿನ ಪೂರ್ಣ ಪಕ್ವತೆಯಿಂದಾಗಿ ಕಳ್ಳನನ್ನು ಕಾಣಲಿಲ್ಲ. ಅವರ ಮನಸ್ಸು ಭಾವೋದ್ವೇಗಗಳಿಂದ ವಿಕೃತಗೊಂಡಿರಲಿಲ್ಲ. ವ್ಯಕ್ತಿಯನ್ನು ವ್ಯಕ್ತಿಯಾಗಿ ಕಂಡರು, ವ್ಯಕ್ತಿಯಾಗಿ ಪ್ರೀತಿಸಿದರು. ಆದ್ದರಿಂದ ಅವರ ಪ್ರೀತಿಯು ಎಲ್ಲರೆಡೆಗೂ ಸಮಾನವಾಗಿ ಹರಿಯಿತು, ನೇರವಾಗಿ ಹರಿಯಿತು, ಅದಕ್ಕೆ ಭಾವೋದ್ವೇಗಗಳ ತಡೆಯಿರಲಿಲ್ಲ. ಇದು ಅವರ ಅಂತರಿಕ ಸರಳತೆಯ ಪರಿಣಾಮ. ''ನನ್ನ ದಯೆಯನ್ನು ಸಂಪಾದಿಸದವನು ನಿಜವಾಗಿಯೂ ದುರದೃಷ್ಟವಂತನೆ. ನಾನು ದಯೆ ತೋರದ ಯಾವನನ್ನೂ ನಾನರಿಯೆ – ಒಂದು ಹುಳವನ್ನೂ ಕೂಡ!'' ಎನ್ನುತ್ತಾರೆ ಶ್ರೀಶಾರದಾದೇವಿಯವರು.

ಶ್ರೀಮಾತೆಯವರ ಈ ಅಹೇತುಕ ಪ್ರೀತಿಯನ್ನು ಕುರಿತಾಗಿ ನಿವೇದಿತಾ ಬರೆಯುತ್ತಾಳೆ: ''ಅವರು ತುಂಬ ಮಡಿವಂತರು, ಆದರೂ ಅವರು ಪಾಶ್ಚಾತ್ಯ ಮಹಿಳೆಯರಾದ ಶ್ರೀಮತಿ ಬುಲ್ ಮತ್ತು ಕುಮಾರಿ ಮ್ಯಾಕ್ಲೋಡ್‌ರನ್ನು ನೋಡಿದಾಕ್ಷಣ ಅವರ ಮಡಿವಂತಿಕೆಯೆಲ್ಲ ಕರಗಿಹೋಯಿತು, ಆ ಮಹಿಳೆಯರೊಡನೆ ತಿಂಡಿಯನ್ನು ಹಂಚಿಕೊಂಡರು!''

ಇಂದಿನ ವಾಣಿಜ್ಯ ಯುಗದಲ್ಲಿ ನಾವು ವ್ಯಕ್ತಿಯನ್ನು ವ್ಯಕ್ತಿಯಾಗಿ ಕಾಣುವುದಿಲ್ಲ, ಒಂದು ಉಪಯುಕ್ತ ವಸ್ತುವಾಗಿ ಕಾಣುತ್ತೇವೆ. 'ಉಪಯೋಗಿಸಿ ಬಿಸಾಕು' (use and throw) ಎಂಬ ನಿಯಮವನ್ನು ಮನುಷ್ಯನಿಗೂ ಅನ್ವಯಿಸುತ್ತಿರುವುದು ಸ್ಪಷ್ಟವಾಗಿ ಕಂಡುಬರುತ್ತಿದೆ. ಆದರೆ ಈ ಧೋರಣೆಯನ್ನು ಶ್ರೀಮಾತೆಯವರು ಸಾಮಾನ್ಯ ವಸ್ತುಗಳಿಗೂ ಅನ್ವಯಿಸುತ್ತಿರಲಿಲ್ಲ. ಈ ರೀತಿ ಎಲ್ಲರಿಗೂ ಮತ್ತು ಎಲ್ಲದಕ್ಕೂ ಯೋಗ್ಯ ಗೌರವವನ್ನು ತೋರಿಸುವ ಸ್ವಭಾವ ಸರಳತೆಯ ಒಂದು ಮುಖ್ಯ ಲಕ್ಷಣ. ಈ ಲಕ್ಷಣದಿಂದ ಶೋಭಿಸುವ ವ್ಯಕ್ತಿಯು ಯಾವಾಗಲೂ ಶಾಂತಿ ಮತ್ತು ಆನಂದವನ್ನು ಹೊರಸೂಸುತ್ತಿರುತ್ತಾನೆ. ಆ ವ್ಯಕ್ತಿಯ ಪ್ರಭಾವದ ವಲಯದೊಳಗೆ ಬರುವ ಎಲ್ಲರೂ ಈ ಶಾಂತಿ ಮತ್ತು ಆನಂದದಿಂದ ಪರಿಪ್ಲುತರಾಗುತ್ತಾರೆ. ಈ ವಿಷಯದಲ್ಲಿ ನಿವೇದಿತಾಳ ಮಾತನ್ನು ಕೇಳೋಣ: ''ಆಃ! ಆಶ್ಚರ್ಯ! ಶ್ರೀಮಾತೆಯರೊಡನಿರುವುದೆಂದರೆ ಎಂಥ ಅದ್ಭುತ ಎಂಬುದನ್ನು ನಿನಗೆ ನಾನು ಹೇಳಲಾರೆ. ಅಂಥ ಒಂದು ಸ್ಥಳ ನಿಜವಾಗಿಯೂ ಇದೆ, ಒಬ್ಬನ ಹೃದಯದ ಕನಸಿನ ಲೋಕ ಇಲ್ಲಿದೆ. ಆ ಮನೆಯೊಳಗೆ ಎಂಥ ಒಂದು ಮಾಧುರ್ಯ! ದೈನಂದಿನ ಕಾರ್ಯಾರಂಭಕ್ಕೆ ಮುಂಚೆ ಆ ಕೊಠಡಿಗೊಮ್ಮೆ ಪ್ರವೇಶಿಸಿದರೆ ಸಾಕು – ಆ ಪ್ರೇಮಚಂದ್ರಿಕೆಯ ಶೀತಳ ಸ್ಪರ್ಶ ಅದೆಷ್ಟು ಮುದವನ್ನು ನೀಡುತ್ತದೆ! ಅದು ನಮ್ಮಿಂದ ಏನನ್ನೂ ಬಯಸುವುದಿಲ್ಲ. ಆಃ! ನಾನದನ್ನು ವರ್ಣಿಸಲಾರೆ! ''

ಸರಳತೆಯ ಇನ್ನೊಂದು ಲಕ್ಷಣ ತನ್ನ ದೋಷವನ್ನು ಮರೆಮಾಚದೆ ಒಪ್ಪಿಕೊಳ್ಳುವುದು. ಸರಳ ವ್ಯಕ್ತಿಗಳ ಮನಸ್ಸು ಮುಕ್ತವಾಗಿರುತ್ತದೆ. ಯಾವುದನ್ನೂ ಬಚ್ಚಿಡುವ ಪ್ರಯತ್ನ ಮಾಡುವುದಿಲ್ಲ. ದ.ರಾ.ಬೇಂದ್ರೆಯವರು ಹೇಳುವಂತೆ, **'ಮುಚ್ಚಿಡುವುದೇಕಿನ್ನು, ಬಚ್ಚಿಡುವುದಿದನೆಲ್ಲಿ, ಮುಚ್ಚುಮರೆ ಮಾಳ್ಪುದಕೆ ಮುಸುಕು ಇಹುದೆಲ್ಲಿ?'** ಮುಚ್ಚಿಡುವ ಆವಶ್ಯಕತೆಯೇ ಇರುವುದಿಲ್ಲ ಹಾಗೂ ಮುಚ್ಚಿಡಲೇಬೇಕಾದಂತಹದೇನೂ ಅವರಲ್ಲಿ ಇರುವುದಿಲ್ಲ. ಏಕೆಂದರೆ ಅವರದು ಪವಿತ್ರಾಂತರಂಗ. ಶ್ರೀಮಾತೆಯವರು ಪವಿತ್ರತಾ ಸ್ವರೂಪಿಣಿಯೇ ಆಗಿದ್ದರು. ಅವರು ಮರೆಮಾಚಬೇಕಾದ ದೋಷಗಳಾವುವೂ ಇರಲೇ ಇಲ್ಲ. ಸಣ್ಣ ಪುಟ್ಟ ತಪ್ಪುಗಳಾದರೂ ಅವನ್ನು ಮರೆಮಾಚುವ ಸ್ವಭಾವವೇ ಅವರಲ್ಲಿರಲಿಲ್ಲ. ಏಕೆಂದರೆ ಅವರು ಯಾವತ್ತೂ ಲೋಕಮಾನ್ಯತೆಯನ್ನು ಬಯಸಿದವರಲ್ಲ. ಲೋಕದ ಕಣ್ಣಿಗೆ ತಾನು ಶ್ರೇಷ್ಠವ್ಯಕ್ತಿಯೆಂದು ತೋರಿಸಿಕೊಳ್ಳುವ ಪ್ರಯತ್ನವನ್ನು ಅವರೆಂದೂ ಮಾಡಲೇ ಇಲ್ಲ. ಆದ್ದರಿಂದಲೇ ಅವರ ನಡೆನುಡಿಗಳಲ್ಲಿ ಮನಸೆಳೆಯುವ ಸಹಜತೆ ಇತ್ತು. ಇದರಿಂದಲೇ ಅವರು ಎಲ್ಲರ ಮೆಚ್ಚುಗೆಗೆ ಪಾತ್ರರಾದರು. ತಪ್ಪೊಪ್ಪಿಕೊಳ್ಳುವ ಈ ಕಲೆ, ಈ ಸರಳತೆ ವ್ಯಕ್ತಿ–ವ್ಯಕ್ತಿಗಳ ನಡುವಿನ ಸಂಬಂಧವನ್ನು ಉತ್ತಮಗೊಳಿಸುವುದು.

ಶ್ರೀಮಾತೆಯವರು ತಮ್ಮ ದೋಷವನ್ನು ಒಪ್ಪಿಕೊಳ್ಳುವ ವಿಧಾನ ಅದೆಷ್ಟು ಚಿತ್ತಾಕರ್ಷಕ! ಈ ಕೆಳಗಿನ ಘಟನೆ ಇದಕ್ಕೊಂದು ನಿದರ್ಶನ: ಒಮ್ಮೆ ಮಾಯಾವತಿಯಿಂದ ಬಂದಿದ್ದ ಭೂತಿಯಾ ಬಾಲಕಿಯರು ಶ್ರೀಮಾತೆಯವರಿಗೊಂದು ಸುಂದರವಾದ ಆಸನವನ್ನು ಕೊಟ್ಟಿದ್ದರು. ಅವರಿಗದು ತುಂಬ ಮೆಚ್ಚಿಕೆಯಾಗಿದ್ದು, ಆ ಬಾಲಕಿಯರ ಭಕ್ತಿ ಮತ್ತು ಕೌಶಲವನ್ನು ಅವರು ಮನತುಂಬ ಹೊಗಳಿದ್ದರು. ಅವರು ಅದನ್ನು ಪೂಜೆಗೆ ಕುಳಿತುಕೊಳ್ಳುವಾಗ ಉಪಯೋಗಿಸುತ್ತಿದ್ದರು. ಒಂದು ದಿನ ಭಕ್ತನೊಬ್ಬನು ಶ್ರೀಮಾತೆಯವರನ್ನು ನೋಡಲು ಹೋಗಿದ್ದಾಗ ಅವರು ಚಿಂತಾಕ್ರಾಂತರಾಗಿ ತಲೆಯ ಮೇಲೆ ಕೈ ಇಟ್ಟುಕೊಂಡು ಕುಳಿತಿದ್ದರು. ಅವರ ಪಕ್ಕದಲ್ಲಿ ಈಳಿಗೆ ಮಣೆಯಿತ್ತು, ಮತ್ತೆ ಅದರೆರಡು ಪಕ್ಕದಲ್ಲಿ ಆಸನದ ತುಂಡಾದ ಎರಡು ಭಾಗಗಳಿದ್ದವು. ಅವರು ಈ ಭಕ್ತನನ್ನು ನೋಡಿದ ಕೂಡಲೇ, ''ನೋಡು ಮಗು, ಎಂಥ ಕೆಲಸ ಮಾಡಿಬಿಟ್ಟೆ'' ಎಂದು ಅತ್ಯಂತ ಕಳವಳದಿಂದ ನುಡಿದರು. ಅನಂತರ ಆಸನದ ಎರಡು ತುಂಡುಗಳನ್ನು ಅವನಿಗೆ ತೋರಿಸಿ ಅತ್ಯಂತ ಪಶ್ಚಾತ್ತಾಪದಿಂದ ನುಡಿದರು, ''ಆ ಬೆಟ್ಟದ ಹುಡುಗಿಯರು ಕೊಟ್ಟಿದ್ದ ಆ ಸುಂದರ ಆಸನ ತುಂಬ ದೊಡ್ಡದಾಗಿತ್ತು. ಅದು ಹೆಚ್ಚು ಜಾಗವನ್ನು ಆಕ್ರಮಿಸಿಕೊಳ್ಳುತ್ತಿತ್ತು. ನನಗೆ ಅಷ್ಟು ದೊಡ್ಡ ಆಸನ ಬೇಕಿರಲಿಲ್ಲ. ಆದ್ದರಿಂದ ಅದನ್ನು ಒಳಭಾಗಕ್ಕೆ ಮಡಿಸಿದೆ. ಆದರೆ ಒಳ್ಳೆಯ ಕಸೂತಿ–ಚಿತ್ರಗಳೆಲ್ಲ ಮರೆಯಾದವು. ಅಷ್ಟೇ ಅಲ್ಲದೆ ಕುಳಿತುಕೊಳ್ಳುವುದಕ್ಕೂ ಕಠಿನವೆನಿಸಿತು. ಇನ್ನೊಂದು ರೀತಿ ಮಡಿಸಿದಾಗ ಕಸೂತಿ–ಚಿತ್ರಗಳು ನೆಲಕ್ಕೆ ತಗುಲಿ ಹಾಳಾಗುವ ಸಂಭವವಿತ್ತು. ಹೇಗೆ ಮಡಿಸಿದರೂ ಕುಳಿತುಕೊಳ್ಳಲು ಅನುಕೂಲವಾಗಿರಲಿಲ್ಲ, ಮತ್ತು ನೋಡುವುದಕ್ಕೂ ಚೆನ್ನಾಗಿ ಕಾಣುತ್ತಿರಲಿಲ್ಲ. ಆಗ ನನಗೆ ಯೋಚನೆ ಬಂತು – ಇದನ್ನು ಎರಡಾಗಿ ತುಂಡು ಮಾಡಿದರೆ ಅದು ಚಿಕ್ಕದಾಗುವುದು ಮಾತ್ರವಲ್ಲದೆ ಇಬ್ಬರು

ಉಪಯೋಗಿಸಬಹುದು – ಎಂದು. ಈ ಈಳಿಗೆಮಣೆಯಿಂದ ಅದನ್ನು ಕತ್ತರಿಸಿದೆ. ಆದರೆ ವಕ್ರವಾಗಿ ಕತ್ತರಿಸಿದ್ದರಿಂದ ಎರಡೂ ಹಾಳಾದವು. ನಾನೆಂಥ ಕೆಲಸ ಮಾಡಿಬಿಟ್ಟೆ ಎಂದು ಈಗ ವ್ಯಥೆಯಾಗುತ್ತಿದೆ. ಸರಳಾ ಇದ್ದಳು, ಅವಳಿಗೆ ಹೇಳಿದ್ದರೆ ಸರಿಯಾಗಿ ಕತ್ತರಿಸಿಕೊಡುತ್ತಿದ್ದಳು. ನಾನೆಂಥ ಮೂರ್ಖೆ! ಯಾರಾದರೂ ಇದನ್ನುನೋಡಿದರೆ ನಗುತ್ತಾರೆ.'' *('ಶ್ರೀಮಾತೆ ಶಾರದಾದೇವಿ', ಪು. ೩೬೩–೬೪)*

ತಾವು ಎಷ್ಟೇ ಗೌರವಕ್ಕೆ ಪಾತ್ರರಾಗಿದ್ದರೂ ಶ್ರೀಮಾತೆಯವರು ತಮ್ಮ ಸ್ವಾಧೀನವನ್ನು ಕಳೆದುಕೊಂಡಿರಲಿಲ್ಲ ಮತ್ತು ಅವರು ಎಂದಿನಂತೆಯೇ ಸರಳರಾಗಿದ್ದರು. ಅವರ ಈ ಗುಣವನ್ನು ಪ್ರತಿಬಿಂಬಿಸುವ ಅನೇಕ ಘಟನೆಗಳಿವೆ. ಅವರು ಉದ್ಬೋಧನದಲ್ಲಿದ್ದಾಗ ಒಮ್ಮೆ ಜೊಸೆಫಿನ್ ಮ್ಯಾಕ್ಲೋಡ್ ಅವರನ್ನು ಸಂಧಿಸಲು ಬಂದಳು. ಅನೇಕ ಮಹಿಳಾ ಭಕ್ತರು ಫಲಪುಷ್ಪಗಳನ್ನು ತಂದು ಅವರಿಗೆ ಅರ್ಪಿಸುತ್ತ ಅವರಿಗೆ ಪ್ರಣಾಮ ಮಾಡುತ್ತಿದ್ದರು. ಈಗ ಮ್ಯಾಕ್ಲೋಡ್‌ಗೆ ಗೊಂದಲ – ತಾನೂ ಎಲ್ಲರಂತೆ ಪ್ರಣಾಮ ಮಾಡುವುದೇ ಬೇಡವೇ ಎಂದು ಯೋಚಿಸುತ್ತ ನಿಂತುಬಿಟ್ಟಳು. ಕೂಡಲೇ ಶ್ರೀಮಾತೆ ಯವರು ಆಕೆಯ ಮುಖವನ್ನೊಮ್ಮೆ ವೀಕ್ಷಿಸಿದರು. ಆಕೆಯ ಪರಿಸ್ಥಿತಿಯನ್ನು ಅರ್ಥಮಾಡಿಕೊಂಡು, ನೀನೇನೂ ಹಾಗೆ ಮಾಡಬೇಕಾಗಿಲ್ಲ ಎಂದು ಕೈಸನ್ನೆಯ ಮೂಲಕ ಸೂಚಿಸಿದರು. ಇತರರ ಅಂತರಂಗವನ್ನು ಅರ್ಥಮಾಡಿಕೊಳ್ಳುವ ಅವರ ಆ ತಾಯ್ತನದ ಅರಿವು ನಿಜವಾಗಿಯೂ ಅಪೂರ್ವವಾದುದು.

ಅನೇಕರು ಶ್ರೀಮಾತೆಯವರ ಮಾತೃಪ್ರೇಮವನ್ನು ಸವಿದರು, ಅವರನ್ನು ಗುರುವಾಗಿ ಸ್ವೀಕರಿಸಿ ಮುಕ್ತರಾದರು. ಮತ್ತನೇಕರು ಅನೇಕ ರೀತಿಯಲ್ಲಿ ಅವರ ಪ್ರಯೋಜನವನ್ನು ಪಡೆದರು. ಆದರೆ ಅವರ ಅಪೂರ್ವ ಸರಳತೆಯ ಹಿಂದಿರುವ ಶ್ರೇಷ್ಠತೆಯನ್ನು ಗುರುತಿಸಿದವರು ಕೆಲವೇ ಮಂದಿ. ಅಂಥವರಲ್ಲಿ ಒಬ್ಬಳು ಸೋದರಿ ನಿವೇದಿತಾ.

ಮಗುವಿಗೆ ತಾಯಿಯು ಸರ್ವಶಕ್ತೆ. ಎಂತಹ ಭಯಾನಕ ಸನ್ನಿವೇಶದಲ್ಲಿಯೂ ಕೂಡ ಮಗುವು ತಾಯಿಯ ಮಡಿಲಲ್ಲಿ ತಾನು ಸಂಪೂರ್ಣ ಸುರಕ್ಷಿತವೆಂದು ಭಾವಿಸುತ್ತದೆ. ನಿವೇದಿತಾಳ ಭಾವವೂ ಅದೇ ಆಗಿತ್ತು. ಈ ಭಾವವು ಅವಳ ಈ ಕೆಳಗಿನ ಮಾತಿನಲ್ಲಿ ವ್ಯಕ್ತವಾಗಿದೆ. ''ನಾನು ದೀರ್ಘ ಕಾಲ ಜೈಲಿಗೆ ಹೋಗಬೇಕಾಗಿ ಬಂದರೂ ನನ್ನ ಸ್ನೇಹಿತರಾರೂ ಆ ಕುರಿತು ಚಿಂತಿಸಬೇಕಾಗಿಲ್ಲ. ಏಕೆಂದರೆ ನಾನು ಕೂಡಲೆ ಧ್ಯಾನಮಗ್ನಳಾಗಿ ಶ್ರೀಮಾತೆಯವರು ಯಾವ ಉನ್ನತ ಮಟ್ಟದಲ್ಲಿರುವರೋ ಆ ಮಟ್ಟಕ್ಕೆ ಏರಿಬಿಡುತ್ತೇನೆ. ಅವರ ಆಳ ಅನುಭವ ಮತ್ತು ಅಪಾರ ಪ್ರೇಮ, ಅದರೊಡನೆ ಸಂಮಿಳಿತಗೊಂಡಿರುವ ಅವರ ಆ ಮಾಧುರ್ಯ ಮತ್ತು ಪ್ರಶಾಂತತೆ – ಇದು ಯಾವ ಕಲ್ಪನೆಗೂ ಮೀರಿದುದು.''

***(Reminiscences of Sri Sarada Devi,** Advaita Ashrama, Kolkata, P. 116)* ❖

website: www.hotelsharada.com, E-mail : hotelsharada@gmail.com
Ph: +91-080-2220 1042, + 91-080-2220 1044

HOTEL SHARADA

1. Opposite: Bangalore City Railway Station
2. Opposite : Kempegowda Bus - Station (KBS)
3. Opposite : Majestic Metro Interchange Station

 # 25/3, Kempegowda Circle,Bangalore - 560 009, Near Upparpet Police Station